ಕರ್ನಾಟಕ ಸರ್ಕಾರ
( ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ: **COMP/33/2021-22**

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯಭವನ
ಕೆಂಪೇಗೌಡ ರಸ್ತೆ, ಬೆಂಗಳೂರು –09
ದಿನಾಂಕ: 27 –12–2021.

## ಜ್ಞಾಪನ

ವಿಷಯ: ಕಾವೇರಿ ತಂತ್ರಾಂಶದಲ್ಲಿ ಭೂಮಿ ಗ್ರಾಮಗಳು ಸರಿಯಾಗಿ ಮ್ಯಾಪಿಂಗ್ ಆಗದೆ ನೋಂದಣಿ ಪ್ರಕ್ರಿಯೆಗೆ ಅಡಚಣೆಯಾಗುತ್ತಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾವೇರಿ ತಂತ್ರಾಂಶದಲ್ಲಿ ಕೆಳಗೆ ತಿಳಿಸಿರುವ ಕಾರಣಗಳಿಂದಾಗಿ ಭೂಮಿ ಗ್ರಾಮಗಳು ಸರಿಯಾಗಿ ಮ್ಯಾಪ್ ಆಗದೆ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡು ಅದನ್ನು ಸರಿಪಡಿಸಲು ಹಲವಾರು ಉಪನೋಂದಣಿ ಕಛೇರಿಗಳಿಂದ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಕೆಯಾಗುತ್ತಿರುತ್ತದೆ.

1. ಹೊಸ ತಾಲ್ಲೂಕುಗಳು ರಚನೆಯಿಂದಾಗಿ
2. ಗ್ರಾಮಗಳು ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಾವಣೆಯಾಗಿರುವುದರಿಂದ
3. ಹೊಸ ಕಂದಾಯ ಗ್ರಾಮಗಳ ರಚನೆಯಿಂದಾಗಿ
4. ಕಾವೇರಿ ತಂತ್ರಾಂಶದಲ್ಲಿ ಗ್ರಾಮ/ ಹೋಬಳಿ/ ತಾಲ್ಲೂಕು ತಪ್ಪಾಗಿ ಮ್ಯಾಪ್ ಆಗಿರುವುದರಿಂದ

ಮೇಲೆ ತಿಳಿಸಿರುವ ಕಾರಣಗಳಿಂದಾಗಿ ಬಹಳಷ್ಟು ಉಪನೋಂದಣಿ ಕಛೇರಿಗಳಲ್ಲಿ ಕೆಲವು ಗ್ರಾಮಗಳಿಗೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿಗೆ ಅಡಚಣೆಯಾಗಿರುತ್ತದೆ. ಅಲ್ಲದೆ FRUITS ತಂತ್ರಾಂಶದಿಂದ ಸಹ ಆನ್‌ಲೈನ್ ಮುಖಾಂತರ ಘೋಷಣಾ ಪತ್ರ ಮತ್ತು ಅಡಮಾನ ಪತ್ರಗಳನ್ನು ಕಾವೇರಿ ತಂತ್ರಾಂಶಕ್ಕೆ ಕಳುಹಿಸಲು ಸಾಧ್ಯವಾಗುತ್ತಿರುವುದಿಲ್ಲ.

ಕಂದಾಯ ಇಲಾಖೆಯಿಂದ ಹೊಸ ತಾಲ್ಲೂಕುಗಳ / ಹೊಸ ಗ್ರಾಮಗಳ ರಚನೆಯ ಹಾಗೂ ಗ್ರಾಮಗಳ ವರ್ಗಾವಣೆಯ ಕುರಿತು ಅಧಿಸೂಚನೆಯಾದ ನಂತರ ಸಂಬಂಧಪಟ್ಟ ಜಿಲ್ಲಾನೋಂದಣಾಧಿಕಾರಿಗಳು ತ್ವರಿತವಾಗಿ ನೋಂದಣಿ ಕಾಯ್ದೆಯಡಿ ಅಧಿಸೂಚನೆ ಹೊರಡಿಸಲು ಕ್ರಮಕೈಗೊಳ್ಳದೆ ಇರುವುದರಿಂದ ಮೇಲೆ ತಿಳಿಸಿರುವ ಮ್ಯಾಪಿಂಗ್ ಸಮಸ್ಯೆಗಳು ಉದ್ಭವವಾಗುತ್ತಿರುತ್ತದೆ.

ಆದುದರಿಂದ ಕಾವೇರಿ ತಂತ್ರಾಂಶದಲ್ಲಿ ಗ್ರಾಮಗಳ ಮ್ಯಾಪಿಂಗ್ ಅನ್ನು ಕುಲಂಕುಷವಾಗಿ ಪರಿಶೀಲಿಸಿ ಅದರಲ್ಲಿರುವ ಲೋಪಗಳನ್ನು ಸರಿಪಡಿಸಲು ಈ ಕಛೇರಿಗೆ ಶೀಘ್ರವಾಗಿ ಪ್ರಸ್ತಾವನೆ

ಸಲ್ಲಿಸಲು ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳಿಗೆ ತಿಳಿಸಿದೆ. ಸದರಿ ಪ್ರಕ್ರಿಯೆಯನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸೂಚಿಸಿದೆ.

27.12.21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ ಮಾಹಿತಿಗಾಗಿ.